# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್.ಸಿ. ನಂ. 34/2024

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ನರೇಗಲ್ ಪೋಲೀಸ್ ಠಾಣೆ.

- ವಿರುದ್ಧ -

ಆರೋಪಿ: ಹನಮಪ್ಪ @ ಹನಮಂತ ತಂದೆಃ ಫಕೀರಪ್ಪ ಮಾದರ,
ವಯಸ್ಸುಃ 35 ವರ್ಷ, ಉದ್ಯೋಗಃ ಕೂಲಿ ಕೆಲಸ,
ಸಾಃ ನಿಡಗುಂದಿ, ತಾಃ ಗಜೇಂದ್ರಗಡ, ಜಿಲ್ಲೆಃ ಗದಗ.

***

## :ದೋಷಾರೋಪಣೆ:

ನಾನು, ಶ್ರೀಮತಿ ನಾಗವೇಣಿ, ಬಿ.ಎ, ಎಲ್.ಎಲ್.ಬಿ., ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,

ನರೇಗಲ್ಲ ಪೋಲೀಸ ಠಾಣೆಯ ಹದ್ದಿಯ ನಿಡಗುಂದಿ ಗ್ರಾಮದ ಆರೋಪಿತರಾದ ನಿಮಗೂ ಹಾಗೂ ಮೃತ ಸತ್ಯಮ್ಮ ಇವರಿಗೂ ದಿನಾಂಕಃ 20.05.2021 ರಂದು ಮದುವೆಯಾಗಿದ್ದು, ಮದುವೆಯಾದಾಗಿನಿಂದ ಆರೋಪಿತರಾದ ನೀವು, ನಿಮ್ಮ ಹೆಂಡತಿ ಮೃತ ಸತ್ಯಮ್ಮ ಇವರ ಮೇಲೆ ವಿನಾಕಾರಣ ಸಂಶಯ ಮಾಡುತ್ತಾ, ಅವರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ನಿರಂತರವಾಗಿ ಕಿರುಕುಳ ನೀಡಿ, ಆಕೆಯನ್ನು ಕ್ರೌರ್ಯಕ್ಕೊಳಪಡಿಸಿ, ಆ ಮೂಲಕ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 498(ಎ) ರ ಪ್ರಕಾರ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

ಕೊನೆಯದಾಗಿ, ಆರೋಪಿತರಾದ ನೀವು, ಮೃತಳ ಮೇಲೆ ವಿನಾಕಾರಣ ಸಂಶಯ ಮಾಡಿ, ಅವಳಿಗೆ ಕಿರುಕುಳ ನೀಡುತ್ತಾ ಬಂದಿದ್ದು, ದಿನಾಂಕಃ 01.03.2024 ರಂದು ರಾತ್ರಿ 08.00 ಗಂಟೆಗೆ ಆರೋಪಿತರಾದ ನೀವು ನಿಮ್ಮ ಹೆಂಡತಿ ಜೊತೆ ತಂಟೆ ತೆಗೆದು, "ಮದುವೆಯಾಗಿ ಮೂರು ವರ್ಷಗಳಾದರೂ ಇನ್ನೂ ಮಕ್ಕಳು ಆಗಿಲ್ಲ, ನೀನು ಸರಿ ಇಲ್ಲಾ, ನನಗ ಯಾಕೆ ಜೋಡಾದಿ, ನಿನ್ನ ಹೊಟ್ಯಾಗ ಒಂದು ಕೂಸು ಹುಟ್ಟಲಿಲ್ಲ, ನೀನು

**SC No. 34/2024**

**Charge**

ಇದ್ದರೆಷ್ಟು, ಸತ್ತರೆಷ್ಟು, ಸತ್ತು ಹೋಗು" ಅಂತಾ ಹೇಳಿದ್ದರಿಂದ, ಸತ್ಯಮ್ಮಳು ಮನನೊಂದು ದಿನಾಂಕಃ 02.03.2024 ರಂದು ಮುಂಜಾನೆ 07.00 ಗಂಟೆಯಿಂದ 09.30 ಗಂಟೆಯ ನಡುವಿನ ಅವಧಿಯಲ್ಲಿ ಆರೋಪಿತರಾದ ನಿಮ್ಮ ಮನೆಯ ಅಡುಗೆ ಕೋಣೆಯಲ್ಲಿರುವ ಸಾಮಾನು ಇಡುವ ಅಟ್ಟಕ್ಕೆ ಅಡ್ಡವಾಗಿ ಹಾಕಿರುವ ಕಬ್ಬಿಣದ ಆ್ಯಂಗ್ಲರ ಪಟ್ಟಿಗೆ ವೇಲದಿಂದ ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆರೋಪಿತರಾದ ನೀವು, ಆಕೆಗೆ ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆ/ಪ್ರಚೋದನೆ ನೀಡಿ, ಅವಳು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿ, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 306 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.

(ಈ ಆಪಾದನೆಯನ್ನು ದಿನಾಂಕಃ 19.06.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ಸಹಿ/-

(ನಾಗವೇಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ